ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/44/ಸಸೂ/ಬಸ್ಥಾವಿ/2020–21

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 27.01.2022

## ಸುತ್ತೋಲೆ

ವಿಷಯ: ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರುಗಳಿಗೆ ವೃತ್ತಿ ಪದೋನ್ನತಿಯಡಿಯಲ್ಲಿ ಉನ್ನತ (Higher)ಎ.ಜಿ.ಪಿ. ರೂ.9000/– ಮಂಜೂರು ಮಾಡುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಸುತ್ತೋಲೆ ಸಂಖ್ಯೆ: ಕಾಶಿಇ/51/ಎಜಿಪಿ/2015–16/ ಬಸ್ಥಾವಿ, ದಿನಾಂಕ : 14.07.2017.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿನ ಸಹಾಯಕ ಪ್ರಾಧ್ಯಾಪಕರುಗಳಿಗೆ ಸಹ ಪ್ರಾಧ್ಯಾಪಕರ ಹುದ್ದೆಯ ವೇತನ ಶ್ರೇಣಿ ರೂ.37400–67000 ರಲ್ಲಿ ರೂ.9000/– ಎ.ಜಿ.ಪಿ. ಮಂಜೂರು ಮಾಡುವ ಸಂಬಂಧ ಪ್ರಾಂಶುಪಾಲರ ಹಂತದ ಪದೋನ್ನತಿ ಸಮಿತಿಯ ಶಿಫಾರಸ್ಸಿನ ಮೇರೆಗೆ ಸ್ವೀಕೃತವಾಗಿರುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ನಿಯಮಗಳಡಿಯಲ್ಲಿ ಕ್ರಮಕೈಗೊಳ್ಳಲು ಈ ಇಲಾಖೆಯ ಹಂತದಲ್ಲಿ ಈ ಕೆಳಕಂಡಂತೆ ವೃತ್ತಿ ಪದೋನ್ನತಿ ಪರಿಶೀಲನಾ ಸಮಿತಿಯನ್ನು ಈ ಕಛೇರಿ ದಿನಾಂಕ: 19.01.2016ರ ಸುತ್ತೋಲೆಯಲ್ಲಿ (Placement Committee) ರಚಿಸಲಾಗಿದೆ.

1. **ಕಾಲೇಜು ಶಿಕ್ಷಣ ನಿರ್ದೇಶಕರು – ಅಧ್ಯಕ್ಷರು**
2. **ಕಾಲೇಜು ಶಿಕ್ಷಣ ಹೆಚ್ಚುವರಿ ನಿರ್ದೇಶಕರು – ಸದಸ್ಯರು**
3. **ಕಾಲೇಜು ಶಿಕ್ಷಣ ಜಂಟಿ ನಿರ್ದೇಶಕರು (ಶೈಕ್ಷಣಿಕ) – ಸದಸ್ಯರು**
4. **ಕಾಲೇಜು ಶಿಕ್ಷಣ ಸಹಾಯಕ ನಿರ್ದೇಶಕರು – ಸದಸ್ಯರು**

ಆದುದರಿಂದ, ರೂ.9000/– ಎ.ಜಿ.ಪಿ. ಮಂಜೂರು ಮಾಡುವ ಸಂಬಂಧ ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಪಟ್ಟಿಯಲ್ಲಿನ ಖಾಸಗಿ ಅನುದಾನಿತ ಪದವಿ ಹಾಗೂ ಶಿಕ್ಷಣ ಕಾಲೇಜಿನ ಸಹಾಯಕ ಪ್ರಾಧ್ಯಾಪಕರುಗಳಿಗೆ ಕೇಂದ್ರ ಕಛೇರಿಯ ಮಾನ್ಯ ನಿರ್ದೇಶಕರ ಕೊಠಡಿಯಲ್ಲಿ ದಿನಾಂಕ:31.01.2022ರ 11:00

ಪೂರ್ವಾಹ್ನ ಏರ್ಪಡಿಸಿರುವ ಸಂದರ್ಶನಕ್ಕೆ ಈ ಕೆಳಕಂಡ ದಾಖಲೆಗಳೊಂದಿಗೆ ಹಾಜರಾಗಬೇಕೆಂದು ತಿಳಿಸಲಾಗಿದೆ.

1) ನೇಮಕಾತಿ ಆದೇಶದ ಪ್ರತಿ.
2) ಎಂ.ಫಿಲ್/ಪಿಹೆಚ್.ಡಿ.(Notification)/ಎಸ್.ಎಲ್.ಇ.ಟಿ./ನೆಟ್ ಹಾಗೂ ತತ್ಸಮಾನ ವಿದ್ಯಾರ್ಹತೆ ಪಡೆದ ಬಗ್ಗೆ ಮೂಲ ದಾಖಲೆಗಳು.
3) ಹಿರಿಯ ವೇತನ ಶ್ರೇಣಿ (ರೂ.7000/-) ಹಾಗೂ ರೂ.8000/- ಎ.ಜಿ.ಪಿ. ಮಂಜೂರು ಮಾಡಲಾಗಿರುವ ಆದೇಶದ ಪ್ರತಿಗಳು.
4) ರೂ.8000/- ಆಯ್ಕೆ ವೇತನ ಶ್ರೇಣಿ ಮಂಜೂರಾದ ನಂತರ ಪೂರೈಸಿರುವ 01 ವಾರದ ತರಬೇತಿಗಳ ಬಗ್ಗೆ ಮೂಲ ದಾಖಲೆಗಳು.
5) ISSN/ISBN ಪ್ರಕಟಣೆಗಳು Ph.D ಪದವಿ ಪಡೆದವರು 01, M.Phil ಪದವಿ ಪಡೆದವರು 02 ಹಾಗೂ ಅನ್ಯರು 03 ತಾವು ಪ್ರಸ್ತಾವನೆಯಲ್ಲಿ ಸಲ್ಲಿಸಿರುವ ಪ್ರಕಟಣೆಗಳ ಮೂಲ ದಾಖಲೆಗಳು.
6) ಎ.ಪಿ.ಐ. ಸ್ಕೋರಿಂಗ್‌ಗೆ ಸಂಬಂಧಿಸಿದಂತಹ ದಾಖಲೆಗಳು ಹಾಗೂ ಪ್ರಾಂಶುಪಾಲರ ಹಂತದ ಸಮಿತಿಯ ಶಿಫಾರಸ್ಸಿನ ಪ್ರತಿ.
7) ಯಾವುದೇ ಶಿಸ್ತು ಪ್ರಕರಣ, ಕ್ರಿಮಿನಲ್ ಮೊಕದ್ದಮೆ ಹಾಗೂ ಅನಧಿಕೃತ ಗೈರು ಹಾಜರಿ ದಾಖಲಾಗಿರುವುದಿಲ್ಲವೆಂಬ ಬಗ್ಗೆ ಪ್ರಾಂಶುಪಾಲರಿಂದ ಪಡೆದ ಪ್ರಮಾಣ ಪತ್ರದ ಪ್ರತಿ.

**ವಿ.ಸೂ.: ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳಿಗೆ ಯಾವುದೇ ಭತ್ಯೆ ನೀಡಲಾಗುವುದಿಲ್ಲ.**

R. Lingeshal

**ಕಾಲೇಜು ಶಿಕ್ಷಣ ಹೆಚ್ಚುವರಿ ನಿರ್ದೇಶಕರು**

**<u>ಇವರಿಗೆ:</u>**

1) ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಇವರ ಆಪ್ತ ಶಾಖೆ. – ಮಾಹಿತಿಗಾಗಿ.
2) ಹೆಚ್ಚುವರಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಇವರ ಆಪ್ತ ಶಾಖೆ. – ಮಾಹಿತಿಗಾಗಿ.
3) ಕಾಲೇಜು ಶಿಕ್ಷಣ ಜಂಟಿ ನಿರ್ದೇಶಕರು (ಶೈಕ್ಷಣಿಕ), ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಇವರ ಆಪ್ತ ಶಾಖೆ. – ಮಾಹಿತಿಗಾಗಿ.
4) ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಧಾರವಾಡ ಹಾಗೂ ಮಂಗಳೂರು–ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರು ಹಾಗೂ ಸಹಾಯಕ ಪ್ರಾಧ್ಯಾಪಕರುಗಳ ಗಮನಕ್ಕೆ ತರಲು ತಿಳಿಸಲಾಗಿದೆ.
5) ಮಾಹಿತಿ ಅಧಿಕಾರಿಗಳು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ.

ರೂ.9000/- ಎ.ಜಿ.ಪಿ. ಕೋರಿರುವ ಖಾಸಗಿ ಅನುದಾನಿತ ಕಾಲೇಜುಗಳು ಸಹಾಯಕ ಪ್ರಾಧ್ಯಾಪಕರುಗಳ ಪಟ್ಟಿ (ಸಂದರ್ಶನಕ್ಕೆ ಹಾಜರಾಗಬೇಕಾದ ದಿನಾಂಕ:31.01.2022ರ 11:00 ಪೂರ್ವಾಹ್ನ)

| ಕ್ರ ಸಂ. | ಸಹಾಯಕ ಪ್ರಾಧ್ಯಾಪಕರ ಹೆಸರು (ಶ್ರೀ/ಶ್ರೀಮತಿ) | ಬೋಧನಾ ವಿಷಯ | ಕಾರ್ಯ ನಿರ್ವಹಿಸುತ್ತಿರುವ ಕಾಲೇಜಿನ ಹೆಸರು |
|---|---|---|---|
| 1 | 2 | 3 | 4 |
| 1 | ಆರ್. ಯೋಗೇಶ್ ಕುಮಾರ್ | ಸಸ್ಯಶಾಸ್ತ್ರ | ಶ್ರೀ ಭುವನೇಂದ್ರ ಕಾಲೇಜು, ಕಾರ್ಕಳ. |
| 2 | ಶಶಿಕಲಾ ಎಂ.ಸಿ | ರಾಜ್ಯಶಾಸ್ತ್ರ | ಗುದ್ಲೆಪ್ಪ ಹಳ್ಳಿಕೇರಿ ಕಾಲೇಜು, ಹಾವೇರಿ. |
| 3 | ಪಿ.ವಿ. ಗಡವಿ | ಹಿಂದಿ | ಎಸ್.ಎಸ್. ಕಲಾ ಮತ್ತು ಟಿ.ಪಿ ವಿಜ್ಞಾನ ಕಾಲೇಜು, ಸಂಕೇಶ್ವರ. |
| 4 | ಡಾ ಎಸ್. ಹೆಚ್ ದೊಡ್ಡಮನಿ | ಕನ್ನಡ | ಎಸ್. ಪಿ.ಕಲಾ ಮತ್ತು ಆರ್.ಆರ್. ಭಂಡಾರಿ ವಾಣಿಜ್ಯ ಹಾಗೂ ಎಸ್.ಎ ರಾಠಿ ವಿಜ್ಞಾನ ಕಾಲೇಜು, ಗುಳೇದಗುಡ್ಡ. |
| 5 | ಡಾ ರಾಜೇಶ್ ಜೆ | ಕನ್ನಡ | ವಿ.ವಿ.ಪುರಂ ಸಂಜೆ ಕಾಲೇಜು, ಬೆಂಗಳೂರು |
| 6 | ಪ್ರಕಾಶ್ | ರಾಜ್ಯಶಾಸ್ತ್ರ | ಹೆಚ್.ಕೆ. ವೀರಣ್ಣಗೌಡ ಪದವಿ ಕಾಲೇಜು, ಮದ್ದೂರು. |
| 7 | ಶ್ರೀಲತಾ ಎಂ | ಕನ್ನಡ | ಹೆಚ್.ಕೆ. ವೀರಣ್ಣಗೌಡ ಪದವಿ ಕಾಲೇಜು, ಮದ್ದೂರು. |
| 8 | ಶ್ರೀ ಬಾಬು ವಿಠಲ ಶ್ಯಾಮ್ ಶೇಂಡಿಗೆ | ಇಂಗ್ಲೀಷ್ | ಹೆಚ್.ಕೆ. ವೀರಣ್ಣಗೌಡ ಪದವಿ ಕಾಲೇಜು, ಮದ್ದೂರು. |

**ವಿಶೇಷ ಸೂಚನೆ:** ಈ ಸೂತ್ತೋಲೆಯಲ್ಲಿ ತಿಳಿಸಲಾಗಿರುವ ದಾಖಲಾತಿಗಳನ್ನು ಈಗಾಗಲೇ ಸಲ್ಲಿಸದೇ ಇದ್ದಲ್ಲಿ ಸಂಬಂಧಿಸಿದ ಸಹಾಯಕ ಪ್ರಾಧ್ಯಾಪಕರು ವಿಭಾಗದ ಇ-ಮೇಲ್ ಐಡಿ plapromotion@gmail.com ಗೆ ಸಲ್ಲಿಸಲು ತಿಳಿಸಲಾಗಿದೆ.

R. Mugesha

ಕಾಲೇಜು ಶಿಕ್ಷಣ ಹೆಚ್ಚುವರಿ ನಿರ್ದೇಶಕರು